**ಅಸಲು ದಾವಾ ನಂಃ 32/2017**
**ಡಿ.ಡಬ್ಲ್ಯೂಃ 3 ,**

**ದಿನಾಂಕ :08-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ. ಎಮ್. ವಿ. ಎಲ್. ವಾದಿ ಪರ ವಕೀಲರಿಂದ :**

ನನ್ನ ತಾಯಿ ಹೆಸರು ಪ್ರಮೀಳಾ. ನನ್ನ ಹೆಂಡತಿ ಹೆಸರು ಅಯ್ಯಮ್ಮ . ಈ ದಾವೆಯ 3ನೇ ಪ್ರತಿವಾದಿ ನನ್ನ ಹೆಂಡತಿ ಎಂದರೆ ಸರಿ. ಮೃತ ವಾದಿ ಮತ್ತು ದೇವಿಂದ್ರಪ್ಪ ಇಬ್ಬರು ಅಣ್ಣ ತಮ್ಮಂದಿರು ಎಂದರೆ ಸರಿ. ಇವರಿಗೆ ಸುಮಿತ್ರ, ಕಲ್ಲಮ್ಮ ಮತ್ತು ಭಾತಮ್ಮ ಮೂರು ಜನ ಸಹೋದರಿಯರು ಎಂದರೆ ಸರಿ. ಕಲಮ್ಮ ಇವರಿಗೆ ಮಕ್ಕಳು ಇಲ್ಲ ಎಂದರೆ ನನಗೆ ಗೊತ್ತಿಲ್ಲಾ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿ ನನಗೆ ಗೊತ್ತಿಲ್ಲಾ. ಪ್ರತಿವಾದಿ ನಂ-9 ಮತ್ತು 10 ಭಾಗಮ್ಮನ ಮಕ್ಕಳು ಎಂದರೆ ಗೊತ್ತಿಲ್ಲಾ. ಮೃತ ವಾದಿ ಶಿವಯೋಗೆಪ್ಪನ ಹೆಂಡತಿ ಯಾರು ಎಂದು ಗೊತ್ತಿಲ್ಲಾ. ದೇವಿಂದ್ರಪ್ಪನ ತಂದೆ ಹೆಸರು ಗೊತ್ತಿಲ್ಲಾ. ದೇವಿಂದ್ರಪ್ಪನ ತಂದೆಗೆ ಎಷ್ಟು ಆಸ್ತಿ ಇತ್ತು ಎಂದು ಗೊತ್ತಿಲ್ಲಾ. ಶಿವಶರಣಪ್ಪ ಖರಿದಿ ಮಾಡಿದ ದಾಖಲೆ ಆಗಿರುತ್ತದೆ. ನಿಡಿ-3 ಕ್ಕೆ ಯಾವ ವರ್ಷ, ಯಾವ ತಾರೀಖನಂದು ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲಾ. ನಾನು ನಿಡಿ-3 ಕ್ಕೆ ಕಾಳನೂರದಲ್ಲಿ ಸಹಿ ಮಾಡಿರುತ್ತೇನೆ. ನಿಡಿ-3 ನ್ನು ಆಸ್ತಿ ಮಾರಾಟ ಮಾಡುವವರು ಟೈಪ ಮಾಡಿಸಿಕೊಂಡು ಬಂದಿದ್ದಾರೆ ಎಂದು ನುಡಿಯುತ್ತಾರೆ. ನಿಡಿ-3 ನ್ನು ಯಾವ ವಕೀಲರು ತಯಾರಿಸಿದರು ಎಂದು ಗೊತ್ತಿಲ್ಲಾ. ಶರಣಪ್ಪ ಮಾತು ಕೇಳಿ ನಾನು ನಿಡಿ-3 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲ . ನಿಡಿ-3 ನ್ನು ಮೃತ ವಾದಿ ಬರೆದುಕೊಟ್ಟಿಲ್ಲಾ ಎಂದರೆ ಸರಿಯಲ್ಲ.

**ಅಸಲು ದಾವಾ ನಂಃ 32/2017**
**ಡಿ.ಡಬ್ಲ್ಯೂಃ 3 ,**

ಮೃತ ವಾದಿಯ ತಂದೆಗೆ ಎಷ್ಟು ಎಕರೆ ಜಮೀನು ಮತ್ತು ಮನೆ ಇತ್ತು ಎಂದು ಗೊತ್ತಿಲ್ಲಾ. ನನ್ನ ಸಾಕ್ಷಿ ಪ್ರಮಾಣ ಪತ್ರ ಪ್ಯಾರಾ ನಂ-3,4 ,5 ರಲ್ಲಿ ತಿಳಿಸಿದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿ ಮನೆ ಸಂಪೂರ್ಣ ಬಿದ್ದು ಹಾಳಾಗಿದೆ ಎಂದರೆ ಸರಿ. ಮೃತ ವಾದಿ ತನ್ನ ಅರ್ಧ ಹಿಸ್ಸೆಯನ್ನು ನಿಡಿ-3 ಪ್ರಕಾರ 2ನೇ ಪ್ರತಿವಾದಿಗೆ ಸ್ವಾಧೀನ ನೀಡಿದ್ದಾನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2ನೇ ಪ್ರತಿವಾದಿ ಖೊಟ್ಟಿಯಾಗಿ ತಯಾರಿಸಿ ಕರಾರು ಪತ್ರಕ್ಕೆ ಅವರ ಮಾತು ಕೇಳಿ ಸಹಿ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನನ್ನ ಸಾಕ್ಷಿ ಪ್ರಮಾಣ ಪತ್ರ ಪ್ಯಾರಾ ನಂ-7 ಮತ್ತು 8 ರಲ್ಲಿ ತಿಳಿಸಿದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**